ದಿಃ 18.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ ಶ್ರೀ ಎ.ಎಮ್. ವಕೀಲರಿಂದ ,</u>**

5. ನಾನು ವಾದಿಯಿಂದ ಹಣ ಪಡೆದಾಗ ನನ್ನೊಂದಿಗೆ ಶಿವರಾಜು ಸಹ ಇದ್ದರು ಎಂದರೆ ಸಾಕ್ಷಿ ವಾದಿಯು ಸುಮ ಎಂಬುವರಿಂದ ನನ್ನ ಅತ್ತೆಗೆ ರೂ. 4,00,000/- ಗಳನ್ನು ಕೊಡಿಸಿದ್ದು, ಆ ಸಮಯ ನಾನು ಸ್ಥಳದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಮೂಲ 2 ನೇ ಪ್ರತಿವಾದಿ ನನ್ನ ನಾದಿನಿ. ಸದರಿ ಶಿವರಾಜು ನನ್ನ ಅತ್ತೆಗೆ ಸಾಲ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸುಮರವರನ್ನು ನಾನು ನೋಡಿರುವುದಿಲ್ಲ. ಸದರಿ ಸುಮ ರವರು ನನ್ನ ಅತ್ತೆಗೆ ಸಾಲ ನೀಡಿದ್ದನ್ನು ನಾನು ಖುದ್ದು ನೋಡಿಲ್ಲ ಎಂದರೆ ಸರಿ. ಸದರಿ ಸುಮ ರವರನ್ನು ಸುಧಾ ಎಂದು ಸಹ ಕರೆಯುತ್ತಾರೆ. ಆ ಸಂಬಂಧ ನನ್ನ ಬಳಿ ದಾಖಲೆ ಇರುವುದಿಲ್ಲ. ಸದರಿ ಸುಮ ರವರು ಸದರಿ ವ್ಯವಹಾರದಲ್ಲಿ ಭಾಗಿಯಾಗಿರುತ್ತಾರೆ ಎಂದು ತೋರಿಸಲು ನಾನು ದಾಖಲೆ ಹಾಜರು ಪಡಿಸಿರುತ್ತೆನೆಯೇ ಎಂದರೆ ಸಾಕ್ಷಿ ಈ ದಾವೆಯನ್ನು ವಾದಿ ಹೂಡಿರುತ್ತಾರೆ ಎಂದು ನುಡಿಯುತ್ತಾರೆ.

6. ದಾವಾ ಸ್ವತ್ತು ತರಿ ಜಮೀನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಅಡಿಕೆ ತೋಟ ಎಂದು ನುಡಿಯುತ್ತಾರೆ. ನಿಪಿ - 1 ಅನ್ನು ಸಾಲದ ಭದ್ರತೆಗಾಗಿ ಬರೆದುಕೊಟ್ಟಿರುತ್ತೇವೆ ಎಂದು ನಿಪಿ - 1 ರಲ್ಲಿ ಬರೆಸಿರುತ್ತೇವೆ. ನಿಪಿ - 1 ರಲ್ಲಿ ಆ ಬಗ್ಗೆ ನಮೂದು ಇಲ್ಲದೇ ಇದ್ದರು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಮುಂದೂಡಲಾಯಿತು.</u>**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

***(ಟಿ.ಶ್ರೀಕಾಂತ್)***

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಭದ್ರಾವತಿ**